
## ಪ್ರಜ್ಞಾವಂತರ ಕಳಕಳಿ...

ಹಬ್ಬದ ಹೆಸರಿನಲ್ಲಿ ಹಗಲಿರುಳು ನಡೆಯುವ ಜೂಜಾಟದ ನಿಷೇಧಕ್ಕೆ ಆಯಾ ಜಿಲ್ಲಾಡಳಿತಗಳು ಮುಂದಾಗಬೇಕು. ಪೊಲೀಸ್ ಇಲಾಖೆ ಇದರ ಬಗ್ಗೆ ಜನಜಾಗೃತಿ ಮೂಡಿಸಬೇಕು. ನಿಷೇಧದ ನಡುವೆಯೂ ಜೂಜಾಡುವವರಿಗೆ ಕಾನೂನಿನ ಮೂಲಕ 'ದಂಡದ ಪಾಠ' ಹೇಳಬೇಕಾಗಿದೆ. ಹಿಂದೆಲ್ಲಾ ಯುಗಾದಿ ಹಬ್ಬ ಮುಗಿದ ಮೇಲೂ ವಾರಗಟ್ಟಲೆ ಜೂಜು ನಡೆಯುತ್ತಿತ್ತು. ಇತ್ತೀಚಿನ ವರ್ಷಗಳಲ್ಲಿ ಹಬ್ಬದ ಸಂದರ್ಭಕ್ಕಷ್ಟೇ ಸೀಮಿತವಾಗಿರುವುದೂ ಇದೆ. ಆದರೆ, ಯಾವ ಜೂಜಾಟವೂ ಒಳ್ಳೆಯದಲ್ಲ. ಆಟವು, ಮೋಜು–ಮಸ್ತಿಯು ಬದುಕನ್ನು ಬೀದಿಗೆ ತಳ್ಳುವ ಚಟ ಆಗಬಾರದು ಎಂಬುದಷ್ಟೇ ಪ್ರಜ್ಞಾವಂತರ ಕಳಕಳಿ.

## ಬಾಡೇ ನಮ್ ಗಾಡು...!

ಮೈಸೂರು ಭಾಗದಲ್ಲಿ ಯುಗಾದಿಗೆ ಸಿಹಿ ಊಟಕ್ಕಿಂತ ಖಾರದೂಟದ ಘಮಲೇ ಜಾಸ್ತಿ ವ್ಯಾಪಿಸಿರುತ್ತದೆ. ಯುಗಾದಿ ಮರುದಿನ 'ವರ್ಷತೊಡಕು' ಆಚರಣೆಯ ಅಂಗವಾಗಿ ಊರಿನ ಅಲ್ಲಲ್ಲಿ ಮನೆಗಳ ಜಗುಲಿಗಳ ಮೇಲೇ 'ಗುಡ್ಡೆ' ರೂಪ ತಾಳುವ ಮಾಂಸವನ್ನು ತಂದು ಖಾದ್ಯಗಳನ್ನು ತಯಾರಿಸಿ ಸವಿಯುವ 'ಬಾಡೂಟದ ಘಮಲು' ಜಾಸ್ತಿಯೇ ಇರುತ್ತದೆ.

ಯುಗಾದಿ ಹಬ್ಬದ ಮೊದಲ ದಿನ ಹೋಳಿಗೆ, ಅಲ್ಲಲ್ಲಿ ದೇವಾಲಯಗಳಲ್ಲಿ ಪೂಜೆಗೆ ಒಯ್ಯಲು ಆರತಿಗಾಗಿ ಸಿದ್ಧಪಡಿಸುವ ತಂಬಿಟ್ಟಿನ 'ಸಿಹಿ'ಯಾನವಾದರೆ, ಮಾರನೇ ದಿನ 'ಬಾಡೇ ನಮ್ ಗಾಡು' ಎಂದುಕೊಂಡು ಬಾಡೂಟದ ಅಬ್ಬರದಲ್ಲಿ 'ತಿನ್ನುವವರು' ಮುಳುಗಿಹೋಗುತ್ತಾರೆ. ನೆಂಟರಿಷ್ಟರನ್ನೂ ಆಹ್ವಾನಿಸಿ ಊಟ ಸವಿದು ಸಂಭ್ರಮಿಸುತ್ತಾರೆ. ಹೀಗಾಗಿಯೇ ಯುಗಾದಿ ಸಂದರ್ಭದಲ್ಲಿ ಮಾಂಸದ ಬೆಲೆ ಸಹಜವಾಗಿಯೇ ಏರಿಕೆ ಆಗುತ್ತದೆ. ಲಕ್ಷಾಂತರ ರೂಪಾಯಿ ವಹಿವಾಟು ನಡೆಯುತ್ತದೆ. ಅದರಲ್ಲೂ ವಿಶಿಷ್ಟ ರುಚಿಯ 'ಬಂಡೂರು' ತಳಿಯ ಮಾಂಸಕ್ಕೆ ಎಲ್ಲಿಲ್ಲದ ಬೇಡಿಕೆ ಇರುತ್ತದೆ. ಇದರ






ಮೈಸೂರಿನ ಕೆ.ಜಿ. ಕೊಪ್ಪಲಿನ ಅಂಗಡಿಯೊಂದರಲ್ಲಿ ಮಾಂಸ ಖರೀದಿಗೆ ಸೇರಿದ್ದ ಗ್ರಾಹಕರು (ಸಂಗ್ರಹ ಚಿತ್ರ)

ಪೂರೈಕೆಯೂ ಜಾಸ್ತಿ ಇರುವುದಿಲ್ಲ. ಎಳೆಮಾಂಸಕ್ಕೆ ಮುಗಿಬೀಳುವವರೇ ಜಾಸ್ತಿ.

ಕುರಿ, ಮೇಕೆ ಕೊಯ್ದು ಅಂಗಾಂಗಗಳನ್ನೆಲ್ಲಾ ಬೇರ್ಪಡಿಸಿ ಕತ್ತರಿಸಿಕೊಡುವ 'ಕೌಶಲಿ'ಗಳಿಗೂ ಬೇಡಿಕೆ ಇರುತ್ತದೆ. ಸ್ಕೂಟರ್‌ಗಳಲ್ಲಿ ಕುರಿ, ಮೇಕೆಗಳ ಚರ್ಮವನ್ನು ಕಟ್ಟಿಕೊಂಡು ಊರಿಂದ ಊರಿಗೆ ಓಡಾಡುತ್ತಾ ಮಾಂಸ ಕತ್ತರಿಸಿಕೊಡುವವರೂ ಕಾಣಸಿಗುತ್ತಾರೆ. ಹಬ್ಬದ ದಿನಕ್ಕಿಂತಲೂ ವರ್ಷತೊಡಕಿನ ದಿನವೇ ಹೆಚ್ಚು ಸಂಭ್ರಮ ಊರ ತುಂಬೆಲ್ಲಾ ಕಂಡುಬರುತ್ತದೆ. ವೈವಿಧ್ಯಮಯ ಆಹಾರ ಸಂಸ್ಕೃತಿಯ ಸಡಗರ ಎಲ್ಲೆಡೆಯೂ ಗೋಚರಿಸುತ್ತದೆ!

ಕೆಲವೆಡೆ, ಹಬ್ಬದ ದಿನದ ಮಧ್ಯರಾತ್ರಿಯಿಂದಲೇ 'ಮರಿ ಕತ್ತರಿಸುವ' ಕಾರ್ಯ ಯುದ್ಧೋಪಾದಿಯಲ್ಲಿ ನಡೆಯುವುದು ಕಂಡುಬರುತ್ತದೆ. ಕಾಯಂ ಹಾಗೂ ತಾತ್ಕಾಲಿಕ ಮಾಂಸದಂಗಡಿಗಳ ಮುಂದೆ ಸರದಿಯ ಸಾಲು ಇರುತ್ತದೆ. ಈ ಸಾಲು, ಕೋವಿಡ್–19ನಂತಹ ಸಾಂಕ್ರಾಮಿಕದ ಸಂದರ್ಭದಲ್ಲೂ ಕರಗಿರಲಿಲ್ಲ! ಬೆಂಗಳೂರಿನಂತಹ ದೊಡ್ಡ ನಗರದಲ್ಲೂ ಸರದಿ ಸಾಲಿನಲ್ಲಿ ಬಂದು ಮಾಂಸ ಖರೀದಿಸಿ 'ವರ್ಷತೊಡಕು' ಆಚರಿಸಿದ್ದು ದೃಶ್ಯಮಾಧ್ಯಮದವರ ಪಾಲಿಗೆ ದೊಡ್ಡ ಸುದ್ದಿಯಾಗಿತ್ತು. ಇನ್ನು, ಸಾಮಾನ್ಯ ವರ್ಷಗಳಲ್ಲಿ ಕೇಳಬೇಕೇ? ವರ್ಷತೊಡಕು ಪ್ರತಿವರ್ಷವೂ ಜೋರೇ...

ಕೆಲವು ಹಳ್ಳಿಗಳಲ್ಲಿ ವರ್ಷದಿಂದಲೂ ಮಾಂಸಕ್ಕಾಗಿಯೇ 'ಮಾಂಸದ ಚೀಟಿ' ಹಾಕುತ್ತಾರೆ. ಅದರಲ್ಲಿ ಕುರಿ, ಮೇಕೆಗಳನ್ನು ಖರೀದಿಸಿ ಕತ್ತರಿಸಿ ಮಾಂಸವನ್ನೆಲ್ಲಾ ಸಮಾನವಾಗಿ ಹಂಚಿಕೆ ಮಾಡಿಕೊಳ್ಳುವ 'ಗುಡ್ಡೆಮಾಂಸದ' ಸಂಪ್ರದಾಯ ನಡೆಯುವುದುಂಟು. ಹೀಗೆ, ಮರಿ, ಕುರಿ ಕತ್ತರಿಸುವಾಗ ಅವುಗಳ ಕಿವಿಯನ್ನು ಸುಟ್ಟು ತಿನ್ನುವುದುಂಟು.

ಪಟ್ಟಣ ಮತ್ತು ನಗರದ ಜನರು ತಾಜಾ 'ನಾಟಿ ಮಾಂಸ'ಕ್ಕಾಗಿ ಮುಂಜಾನೆಯೇ ಕೆಲವು ಹಳ್ಳಿಗಳಿಗೆ ಹೋಗಿ ಖರೀದಿಸಿ ಬರುವುದುಂಟು. ಇಳಿಸಂಜೆಯವರೆಗೂ ಮಾಂಸದ ಮಾರಾಟ ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

'ಆಡು ಮುಟ್ಟದ ಸೊಪ್ಪಿಲ್ಲ'... ಎಲ್ಲ ರೀತಿಯ ಸೊಪ್ಪನ್ನೂ ತಿಂದು ಜೀರ್ಣಿಸಿಕೊಳ್ಳುವ ಶಕ್ತಿಯುಳ್ಳ ಕಾರಣದಿಂದ ಬಹಳ ರುಚಿಯನ್ನು ಹೊಂದಿರುವ ಆಡಿನ ಮಾಂಸಕ್ಕೆ ಬಹಳ ಬೇಡಿಕೆ ಇರುತ್ತದೆ. ಕುರಿಯ ಬಾಡಿಗಿಂತ ಆಡಿನ ಬಾಡಿಗೆ ಹೆಚ್ಚಿನ ಬೇಡಿಕೆ.

ಮೊದಲು ಖರೀದಿಸಿದವರು ಉಪಾಹಾರಕ್ಕೇ ಮಾಂಸದ ಖಾದ್ಯ ಸಿದ್ಧಪಡಿಸಿ ಘಮಲು ಹರಡಿಸುವುದುಂಟು. ತಂಗಳು ಸಂಪಳದ ದೋಸೆ ಮತ್ತು ಇಡ್ಲಿಗೆ ಬಿಸಿ ಬಾಡಿನ ಸಾರು ಊಟ ಮಾಡಿ, ಖುಷಿಪಡುವವರೆಷ್ಟೋ... ಇಸ್ಪೀಟ್ ಆಡಲೆಂದು ಹೋಗುವವರೆಷ್ಟೋ...

ಕೆಲವರು ಕಾಲಿನ ಸಾರು, ಕೆಲವರು ಬೋಟಿ ಗೊಜ್ಜನ್ನೂ ಮಾಡುತ್ತಾರೆ. ಮಧ್ಯಾಹ್ನದ ಊಟಕ್ಕೆ ಬಿಸಿ ರಾಗಿಮುದ್ದೆಯ ಜೊತೆಗೆ 'ಬಾಡಿನೆಸರು' ಪ್ರಿಯವಾದ ಜುಗಲ್‌ಬಂದಿ. ಇದರ ರುಚಿಯ ಗಮ್ಮತ್ತೇ ಗಮ್ಮತ್ತು ಎನ್ನುತ್ತಾರೆ ಸವಿಯುವವರು. ಹೊರಗಿನಿಂದ ಹಬ್ಬಕ್ಕೆ ಬಂದ ಕುಟುಂಬದ ಕುಡಿಗಳು ಬಾಡೂಟ ಸವಿದೇ, ಒಂದಷ್ಟನ್ನು ಪಾರ್ಸಲ್ ತೆಗೆದುಕೊಂಡೇ ಮರಳುತ್ತವೆ. ಕೆಲವರು, ಕುರಿ, ಆಡುಗಳ ತಲೆ ಕಾಲುಗಳನ್ನು ಇಟ್ಟುಕೊಂಡು ಮರುದಿನ ಅದರ ಸಾಂಬಾರು ಮಾಡಿ ಸವಿಯುತ್ತಾರೆ.

'ಈ ಬಾಡೂಟದ ಆಚರಣೆಯು ಬೆಸುಗೆಯ ಒಸಗೆಯ ಮಾಯಾವಿಯೂ ಹೌದು. ಒಡೆದ ಮನಸ್ಸುಗಳನ್ನು, ಮನೆಗಳನ್ನು ಒಂದಾಗಿಸಿದ ಸಾಕಷ್ಟು ನಿದರ್ಶನಗಳಿವೆ. ಹೀಗಾಗಿಯೇ, ಮೈಸೂರು, ಮಂಡ್ಯ, ಹಾಸನ, ಚಾಮರಾಜನಗರ ಭಾಗದಲ್ಲಿ ಯುಗಾದಿಯ ಹಬ್ಬಕ್ಕೆ ಬಾಡೂಟದ್ದೇ ಮೆರುಗು' ಎನ್ನುವ ವ್ಯಾಖ್ಯಾನ ಕವಿ ಸತೀಶ ಜವರೇಗೌಡ ಅವರದು.

ಒಂದೆಡೆ, ಇಸ್ಪೀಟ್ ಜೂಜಾಟ ಮನಸ್ಸುಗಳನ್ನು ಒಡೆದರೆ, ಕೆಡಿಸಿದರೆ, ಇನ್ನೊಂದೆಡೆ ನಡೆಯುವ ವರ್ಷತೊಡಕಿನ ಬಾಡೂಟವು ಎಲ್ಲರನ್ನೂ ಕೂಡಿಸುತ್ತದೆ. ಒಂದು ಹಬ್ಬದಲ್ಲೇ ಎಷ್ಟೆಲ್ಲಾ ವೈವಿಧ್ಯ? ಆಯ್ಕೆಯು ನಮ್ಮ ಕೈಗಳಲ್ಲೇ ಇದೆ.